## ನಿಮ್ಮೊಡನೆ

# ಪಾಪವನ್ನು ಬಿತ್ತಿ ಪುಣ್ಯ ನಿರೀಕ್ಷಿಸಲಾಗದು

**ಸರ್ಕಾರಿ ವ್ಯವಸ್ಥೆಯಲ್ಲಿನ ಕೊಳಕುತನ ಬಯಲಿಗೆ ಬಂದಾಗ, ಆರೋಗ್ಯಕರ ಸಮಾಜದಲ್ಲಿ ಸಾರ್ವಜನಿಕ ಪ್ರತಿರೋಧ ದೊಡ್ಡ ಪ್ರಮಾಣದಲ್ಲಿ ವ್ಯಕ್ತವಾಗಬೇಕು. ನಮ್ಮದು ತದ್ವಿರುದ್ಧ ನಡೆ. ಲಂಚಗುಳಿತನ, ಭ್ರಷ್ಟಾಚಾರವನ್ನು ನಾವೇ ಪೋಷಿಸುತ್ತೇವೆ. ಈ ಅಪಾಯಕಾರಿ ಸಹನೆ ನಮ್ಮನ್ನೇ ಸುಡುತ್ತದೆ.**


ಈಶ್ವರ್

ಆಕಾಶ ಚಿನ್ನದ ಮಳೆಗರೆವ ಕಥೆಗಳು ಪುರಾಣಗಳಲ್ಲಿವೆ. ಇಂದಿನ ಪ್ರಜಾಪ್ರಭುತ್ವ ಯುಗದ ಕನ್ನಡಿಗರು ಪಿವಿಸಿ ಪೈಪು ಹಣ ಸುರಿಸಿದ್ದನ್ನು ಕಂಡಿದ್ದಾರೆ. ಆ ರೋಮಾಂಚಕ ದೃಶ್ಯವನ್ನು ವಾಹಿನಿಗಳಲ್ಲೋ ಸಾಮಾಜಿಕ ಜಾಲತಾಣಗಳಲ್ಲೋ ಮತ್ತೆ ಮತ್ತೆ ನೋಡಿ, ಪುರಾಣಪ್ರಸಂಗ ವರ್ತಮಾನದಲ್ಲಿ ಹೊಸಬಗೆಯಲ್ಲಿ ಅನಾವರಣಗೊಂಡಿತೆಂದು 'ಪರಂಪರೆಪ್ರಿಯರು' ಪುಳಕಗೊಳ್ಳಬಹುದು. ಈ ದೃಶ್ಯ ಹಲವರಿಗೆ ಮನರಂಜನೆಯಾಗಿಯೂ ಕಾಣಿಸಿರಬಹುದು. ಕೆಲವರನ್ನು ಮಾತ್ರ ಇಂಥ ದೃಶ್ಯಗಳು ಕಂಗೆಡಿಸುತ್ತವೆ, ಲಜ್ಜೆಯಿಂದ ತಲೆತಗ್ಗಿಸುವಂತೆ ಮಾಡುತ್ತವೆ.

ಲೋಕಾಯುಕ್ತ ಸಂಸ್ಥೆ ನಿದ್ದೆಯಿಂದ ಇದ್ದಕ್ಕಿದ್ದಂತೆ ಎಚ್ಚರಗೊಂಡ ಕಾಲದಲ್ಲಿ ಭ್ರಷ್ಟ ಅಧಿಕಾರಿಗಳ ಕೊಳಕುತನವನ್ನು ಬಯಲು ಮಾಡುವ ಸುದ್ದಿಗಳು ಪತ್ರಿಕೆಗಳಲ್ಲಿ, ವಾಹಿನಿಗಳಲ್ಲಿ ಪದೇ ಪದೇ ಪ್ರಕಟಗೊಳ್ಳುತ್ತಿದ್ದವು. ಈಗ ಲೋಕಾಯುಕ್ತದ ಸ್ಥಾನವನ್ನು 'ಭ್ರಷ್ಟಾಚಾರ ನಿಗ್ರಹ ದಳ' (ಎಸಿಬಿ) ವಹಿಸಿಕೊಂಡಿದೆ. ಆಗಾಗ ಅಧಿಕಾರಿಗಳ ಮನೆಗಳ ಮೇಲೆ ದಾಳಿ ನಡೆಸಿ, ಅವರ ಅಕ್ರಮ ಸಂಪತ್ತಿನ 'ಒಂದು ಭಾಗ'ವನ್ನು ಜನರಿಗೆ ಕಾಣಿಸುವಂತೆ ಮಾಡುತ್ತದೆ. ಕಳೆದ ವಾರ 'ಎಸಿಬಿ' ನಡೆಸಿದ ದಾಳಿಯೊಂದರಲ್ಲಿ, ಪೈಪೊಂದರಲ್ಲಿ ನೋಟಿನ ಕಂತೆಗಳು ಪತ್ತೆಯಾಗಿವೆ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ನಡೆದ ದಾಳಿಗಳಲ್ಲಿ, ಅಧಿಕಾರಿಗಳ ಮನೆಗಳಲ್ಲಿ ಹಣದ ಕಂತೆಗಳು, ಚಿನ್ನದ ಆಭರಣಗಳು–ಗಟ್ಟಿಗಳು ಹಾಗೂ ನಿವೇಶನ, ಕೃಷಿ ಜಮೀನಿನ ಕಾಗದಪತ್ರಗಳು ಪತ್ತೆಯಾಗಿವೆ. ಜನಪ್ರಿಯ ಸಿನಿಮಾಗಳಲ್ಲಿನ ಕಾಲ್ಪನಿಕ ದೃಶ್ಯಗಳನ್ನೂ ಮೀರಿಸುವಂತಹ ವರ್ತಮಾನದ ನೈಜ ಘಟನೆಗಳ ಸಚಿತ್ರ ವರದಿ–ದೃಶ್ಯಾವಳಿಗಳನ್ನು ನೋಡುವ ಜನಸಾಮಾನ್ಯರು, ವ್ಯವಸ್ಥೆಯಲ್ಲಿನ ಭ್ರಷ್ಟಾಚಾರದ ಬಗ್ಗೆ ಲೊಚಗುಡುತ್ತಾರೆ. ತಮಗೆ ಅಂಥ ಅದೃಷ್ಟವಿಲ್ಲವೆಂದು ಒಳಗೊಳಗೇ ಕೊರಗುವವರೂ ಇದ್ದಾರೆ. ಮುಂದೇನು?

ಲೋಕಾಯುಕ್ತ ಅಥವಾ ಎಸಿಬಿ ದಾಳಿಗಳಲ್ಲಿ ಸಿಕ್ಕಿಬಿದ್ದ ಭ್ರಷ್ಟರಲ್ಲಿ ಎಷ್ಟು ಮಂದಿಗೆ ಶಿಕ್ಷೆಯಾಗಿದೆ? ಎಷ್ಟು ಮಂದಿ ಜೈಲು ಸೇರಿದ್ದಾರೆ? – ಇಂಥ ಪ್ರಶ್ನೆಗಳಿಗೆ ದೊರೆಯುವ ಉತ್ತರ ಆಶಾದಾಯಕವಾಗಿಲ್ಲ. ಅಧಿಕಾರಿಗಳ ಕೊಳಕುತನದ ಅನಾವರಣದ ದಾಳಿಗಳು ಕೂಡ ಜನಪ್ರಿಯ ಸಿನಿಮಾಗಳು ಕಟ್ಟಿಕೊಡುವ ಭ್ರಮೆಗಳಾಚೆಗೆ ಯಾವ ಪರಿಣಾಮವನ್ನೂ ಉಂಟುಮಾಡುತ್ತಿಲ್ಲ. ಮಾಧ್ಯಮಗಳಲ್ಲಿ ಪ್ರಕಟವಾಗುವ ನೋಟುಗಳ ಕಂತೆಗಳು ಹಾಗೂ ಆಭರಣಗಳ ಗುಡ್ಡೆಗಳು ಭ್ರಷ್ಟಾಚಾರದ ಪ್ರಮಾಣವನ್ನಷ್ಟೇ ಕಾಣಿಸುವುದಿಲ್ಲ; ಆ ಭ್ರಷ್ಟರಿಗೆ ಅವರು ತಿಂದದ್ದನ್ನು ಅರಗಿಸಿಕೊಳ್ಳುವ ಶಕ್ತಿಯೂ ಇದೆ ಎನ್ನುವುದನ್ನೂ ಸೂಚಿಸುತ್ತವೆ. ದುಡ್ಡಿದ್ದವನು ದೊಡ್ಡಪ್ಪ ಎನ್ನುವ ಕಟುವಾಸ್ತವವನ್ನು ಸಾರ್ವಜನಿಕರು ಒಪ್ಪಿಕೊಂಡು ಬಹಳ ಕಾಲವಾಗಿದೆ.

ಲಂಚ, ಭ್ರಷ್ಟಾಚಾರ ಎನ್ನುವುದು ಈಗ ಸಮಾಜದ ಕಣ್ಣಿಗೆ ಅಮೇಧ್ಯವಾಗಿ ಉಳಿದಿಲ್ಲ. ಆಕರ್ಷಕ ಸಂಬಳದ ಖಾಸಗಿ ಉದ್ಯೋಗಗಳ ಅವಕಾಶಗಳಿದ್ದಾಗಲೂ ಸರ್ಕಾರಿ ನೌಕರಿಗೆ ಹಾತೊರೆಯುವವರ ಸಂಖ್ಯೆ ದೊಡ್ಡದಿದೆ. ಇದಕ್ಕೆ ಕಾರಣ, ಉದ್ಯೋಗದಲ್ಲಿನ ಭದ್ರತೆಯಲ್ಲ; ಸರ್ಕಾರಿ ಕೆಲಸ ದೇವರ ಕೆಲಸ ಎನ್ನುವ ಸದಾಶಯವೂ ಅಲ್ಲ. ಸರ್ಕಾರದ ಕಾರ್ಯಕ್ಷೇತ್ರ ಉದ್ಯೋಗಾಕಾಂಕ್ಷಿಗಳ ಕಣ್ಣಿಗೆ ಫಲವತ್ತಾದ ಹುಲ್ಲುಗಾವಲಿನಂತೆ ಕಾಣಿಸುತ್ತಿದೆ. ಆ ಹುಲ್ಲುಗಾವಲಿಗೆ ನುಗ್ಗಿ, ಸಾಧ್ಯವಾದಷ್ಟೂ ಮೇಯುವ ಉದ್ದೇಶ ಅವರದು. ಸರ್ಕಾರಿ ಉದ್ಯೋಗವನ್ನು ಲಂಚಬಾಕತನಕ್ಕೆ ನೀಡುವ ಪರವಾನಗಿಯಂತೆ ನೋಡುವವರಿದ್ದಾರೆ. ಸಾರ್ವಜನಿಕ ಜೀವನದಲ್ಲಿ ವ್ಯಕ್ತಿಯೊಬ್ಬ ಪ್ರಾಮಾಣಿಕತೆಯಿಂದ ಇರಲು ಪ್ರಯತ್ನಿಸಿದರೆ, 'ಬದುಕಲು ಗೊತ್ತಿಲ್ಲದವ' ಎನ್ನುವ ಮೂದಲಿಕೆಗೆ ಅನುಕಂಪಕ್ಕೆ ಒಳಗಾಗಬೇಕಾಗುತ್ತದೆ.

ಸರ್ಕಾರಿ ವ್ಯವಸ್ಥೆಯಲ್ಲಿನ ಕೊಳಕುತನ ಬಯಲಿಗೆ ಬಂದಾಗ, ಆರೋಗ್ಯಕರ ಸಮಾಜದಲ್ಲಿ ಸಾರ್ವಜನಿಕ ಪ್ರತಿರೋಧ ದೊಡ್ಡ ಪ್ರಮಾಣದಲ್ಲಿ ವ್ಯಕ್ತವಾಗಬೇಕು. ಆದಾಯಕ್ಕಿಂತ ಹೆಚ್ಚಿನ ಸಂಪಾದನೆಯನ್ನು ಅಧಿಕಾರಿಯೊಬ್ಬ ಹೊಂದಿರುವ ವಿಷಯ ಬೆಳಕಿಗೆ ಬಂದಾಗ, ಅದನ್ನು ಸಮಾಜ ಪ್ರಶ್ನಿಸಬೇಕು. ಆದರೆ, ನಮ್ಮದು ತದ್ವಿರುದ್ಧ ನಡೆ. ಅಧಿಕಾರಿಗಳ ಲಂಚಗುಳಿತನವನ್ನು ನಾವೇ ಪೋಷಿಸುತ್ತೇವೆ. ರಾಜಕಾರಣಿಯೊಬ್ಬ ಭ್ರಷ್ಟ ಎಂದು ತಿಳಿದಿದ್ದರೂ, ಚಾರಿತ್ರ್ಯಹೀನ ಎಂದು ತಿಳಿದಿದ್ದರೂ ನಮ್ಮ ಪ್ರತಿನಿಧಿಗಳಾಗಿ ಚುನಾಯಿಸುತ್ತೇವೆ. ಈ ಅಪಾಯಕಾರಿ ಸಹನೆ ನಮ್ಮನ್ನೇ ಸುಡತೊಡಗುತ್ತದೆ. ಭ್ರಷ್ಟತೆಯನ್ನು ಬಿತ್ತಿ ಸಾಮಾಜಿಕ ಕಾಳಜಿಯ ಫಲವನ್ನು ನಿರೀಕ್ಷಿಸುವ ಪ್ರಜಾಪ್ರಭುತ್ವ ನಡವಳಿಕೆ ನಮ್ಮದು.

ಅಧಿಕಾರಿಗಳು ಭ್ರಷ್ಟರಾಗಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ನೈತಿಕತೆ ಉಳಿದಿಲ್ಲ. ವೈದ್ಯಕೀಯ ಕ್ಷೇತ್ರ ವ್ಯಾಪಾರೀಕರಣಗೊಂಡಿದೆ. ಬೆಲೆಯೇರಿಕೆ ಎನ್ನುವುದು ಜನಸಾಮಾನ್ಯರ ಪಾಲಿಗೆ ನಿತ್ಯದ ಅಗ್ನಿಪರೀಕ್ಷೆಯಾಗಿದೆ. ಇಷ್ಟಾದರೂ ಜನಸಾಮಾನ್ಯರ ಅಸಹಾಯಕತೆ ಆಕ್ರೋಶವಾಗಿ ಬದಲಾಗುತ್ತಿಲ್ಲ. ವೈಯಕ್ತಿಕ ಸಿಟ್ಟು ಸಂಘಟಿತಗೊಳ್ಳುತ್ತಿಲ್ಲ. ಪ್ರಶ್ನೆ ಮತ್ತು ಪ್ರತಿಭಟನೆಯ ಗುಣ ಮರೆತುಹೋಗುತ್ತಿದೆ. ನಮ್ಮ ಸಮಾಜದಲ್ಲಿ ಪ್ರತಿರೋಧದ ಸಾಮರ್ಥ್ಯ ಇನ್ನೂ ಉಳಿದಿದೆಯೇನೋ ಎನ್ನುವುದನ್ನು ಪರೀಕ್ಷಿಸುವಂತೆ, ಆಗಾಗ ಭ್ರಷ್ಟರ ಮೇಲೆ ದಾಳಿಗಳ ಪ್ರಹಸನಗಳು ನಡೆಯುತ್ತಲೇ ಇವೆ.

■ ರಘುನಾಥ ಚ.ಹ.